## 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.101-2012** **ಡಿ . ಡಬ್ಲ್ಯುಃ 2**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಬಿ.ಎಸ್.ಕುಮಾರಸ್ವಾಮಿ<br>ಬಸವನಪುರ ಗ್ರಾಮ, ನಂಜನಗೂಡು |
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 28-10-2022. |

**<u>ಪಾಟೀ ಸವಾಲುಃ ಶ್ರೀ ಕೆ.ಎಸ್.ಕೆ ವಕೀಲರಿಂದಃ</u>**

ನನಗೆ ಪ್ರತಿವಾದಿ ಮತ್ತು ಅವರ ಕುಟುಂಬದವರು ಗೊತ್ತು. ಅವರಿಗೆ ನಾಲ್ವರು ಸಹೋದರರು ಮತ್ತು ಇಬ್ಬರೂ ಸಹೋದರಿಯರು ಇರುತ್ತಾರೆ. 1986 ರಲ್ಲಿ ಆಸ್ತಿ ವಿಭಾಗವಾದಾಗ ವಾದಿ ಮತ್ತು ಪ್ರತಿವಾದಿಗಳ ತಂದೆ-ತಾಯಿಗಳು ಜೀವಂತ ಇದ್ದರು. ಆಗ ನನಗೆ ಸುಮಾರು 18 ವರ್ಷ ವಯಸ್ಸಾಗಿತ್ತು. ಪ್ರತಿವಾದಿಗಳೆಲ್ಲರೂ ನನಗಿಂತ ಕಿರಿಯರು ಎಂದರೆ ಸರಿ. ವಿಭಾಗದ ಸಮಯ ನಾನು ನನ್ನ ತಂದೆಯೊಡನೆ ಹೋಗಿದ್ದು, ಅಲ್ಲಿ ಏನು ವ್ಯವಹಾರ ನಡೆಯಿತು ಎಂದು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಮತ್ತು ಅವರ ತಂದೆ ನನ್ನ ತಂದೆಯವರಿಂದ ಸಾಲ ಪಡೆದಿದ್ದರು. ಪಾಲುಪಾರಿಕತ್ತಿನಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ವಾದಿ ಮತ್ತು ಪ್ರತಿವಾದಿಗಳು ವ್ಯವಸಾಯದಿಂದ ಜೀವನ ಸಾಗಿಸುತ್ತಿರುತ್ತಾರೆ ಎಂದರೆ ಸರಿ. 1 ನೇ ಪ್ರತಿವಾದಿ ಮತ್ತು ಅವರ ತಂದೆ ನನ್ನ ತಂದೆಯಿಂದ ವ್ಯವಸಾಯದ ಅಭಿವೃದ್ಧಿಗಾಗಿ ಸಾಲ ಪಡೆದಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ಅವರು 1 ನೇ ಪ್ರತಿವಾದಿ ಹುಚ್ಚಯ್ಯನ ತಂಗಿ ಮದುವೆಗಾಗಿ ಸಾಲ ಪಡೆದಿದ್ದರು ಎಂದು ನುಡಿಯುತ್ತಾರೆ. ಸದರಿ ವಿಚಾರ ನನಗೆ ತಂದೆಯವರಿಗೆ ಗೊತ್ತು ಎಂದರೆ ಸರಿ. 1 ನೇ ಪ್ರತಿವಾದಿ ಮತ್ತು ಅವರ ತಂದೆ ನನ್ನ ತಂದೆಯವರಿಂದ ಸಾಲ ಪಡೆದಾಗ ಒಟ್ಟು ಕುಟುಬಂದಲ್ಲಿಯೇ ಜೀವನ ಮಾಡುತ್ತಿದ್ದರು ಎಂದರೆ ಸರಿ. ನನ್ನ ತಂದೆಯವರು ಪ್ರತಿವಾದಿಗಳಿಗೆ ನಾನು ಹೇಳುವಂತೆ ಯಾವುದೇ ಪ್ರನೋಟ್ ಪತ್ರವನ್ನು ವಾಪಸ್ಸು ಮಾಡಿರುವುದಿಲ್ಲ ಎಂದರೆ ಸರಿಯಲ್ಲ ನಾನು 1 ನೇ ಪ್ರತಿವಾದಿಗೆ ಅನುಕೂಲವಾಗಲಿ ಎಂಬ ಉದ್ದೇಶದಿಂದ ನನ್ನ ತಂದೆಯವರಿಂದ ರೂ.3,000/- ಗಳನ್ನು ಸಾಲ ಪಡೆದಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**